1	2	3	4	5
2. ಲುಕ್‌ಮನ್ ಕಾಲೇಜ್ ಆಫ್ ಫಾರ್ಮಸಿ, ಗುಲ್ಬರ್ಗಾ	40	10	4	6
3. ಫರೂಕಿಯಾ ಕಾಲೇಜು ಆಫ್ ಫಾರ್ಮಸಿ, ಮೈಸೂರು	40	10	4	6
4. ಆಕ್ಸ್‌ಫರ್ಡ್ ಕಾಲೇಜ್ ಆಫ್ ಫಾರ್ಮಸಿ, ಬೆಂಗಳೂರು	60	15	6	9
5. ಕೆಎಂಸಿ ಕಾಲೇಜ್ ಆಫ್ ಫಾರ್ಮಸಿ, ಮಣಿಪಾಲ್	100	25	10	15

ಮಿನರಲ್ ವಾಟರ್ ಗುಣಮಟ್ಟ

1005 - ಶ್ರೀ ಲಿಂಗಪ್ಪ ಸಿ.ಎಂ. (ರಾಮನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಿನರಲ್ ವಾಟರ್ ಎಂದು ವಿವಿಧ ಹೆಸರಿನಲ್ಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿರುವ ಕುಡಿಯುವ ಬಾಟ್ಲಿ ವಿವಿಧ ಗುಣಮಟ್ಟದ ಬಗ್ಗೆ ಪರೀಕ್ಷೆ ನಡೆಸಿ ದೃಢೀಕರಣ ಪತ್ರ ನೀಡಲಾಗುತ್ತಿದೆಯೇ?

ಆ) ಇವುಗಳ ಮಾರಾಟ ದರವನ್ನು ನಿಗಧಿಪಡಿಸುವಾಗ ಸಂಬಂಧಪಟ್ಟ ಇಲಾಖೆಯವರನ್ನು ಸಮಾಲೋಚಿಸಿ ನಿಗಧಿಪಡಿಸಲಾಗುತ್ತಿದೆಯೇ?

ಇ) ಶುದ್ಧವಾದ ಹಾಲಿನ ದರ ಒಂದು ಲೀಟರ್‌ಗೆ ರೂ. 11.00 ಇರುವಾಗ ಮಿನರಲ್ ವಾಟರ್ ಎಂದು ಕರೆಯಲಾಗುವ ನೀರಿನ ದರ ಲೀಟರ್‌ಗೆ ರೂ.11.00 ರಿಂದ ರೂ. 16.00 ರವರೆಗೆ ನಿಗಧಿಪಡಿಸಿರುವುದರನ್ನು ಸರ್ಕಾರ ಸಮರ್ಥಿಸುವುದೇ?

ಈ) ಹಾಗಿದ್ದಲ್ಲಿ ಈ ಬಗೆಯ ನೀರಿಗೆ ಬೆಲೆಯನ್ನು ನಿಗಧಿಪಡಿಸಲು ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳು ಯಾವುವು?

ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಸ್ವೀಕೃತವಾಗುವ ವಿವಿಧ ಹೆಸರಿನ ಮಿನರಲ್ ವಾಟರ್‌ಗಳನ್ನು ವಿಶ್ಲೇಷಿಸಲಾಗುತ್ತಿದೆ. ಹಾಗೂ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರಗಳನ್ನು ನೀಡಲಾಗುತ್ತಿದೆ.

ಆ), ಇ) ಮತ್ತು ಈ) ಮಿನರಲ್ ವಾಟರ್ ಒಂದು ಅತ್ಯಾವಶ್ಯಕ ಸರಕು ಅಲ್ಲದ್ದರಿಂದ ಸರ್ಕಾರ ಇದರ ದರ ನಿಗಧಿಪಡಿಸುತ್ತಿಲ್ಲ. ಮಾರುಕಟ್ಟೆಯಲ್ಲಿ ಹಲವಾರು ಸಮನಾಂತರ ಬದಲಿ ಪದಾರ್ಥಗಳು ಕಡಿಮೆ ಬೆಲೆಗೆ ದೊರೆಯುತ್ತವೆ.